**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕಡೂರು**

**ಸಿಸಿ. ನಂ. 1164/2024**

| | | |
|---|---|---|
| ಫಿರ್ಯಾದುದಾರರು | : | ಮೇಃ ಶ್ರೀ ಆಶಾಪುರ ಹಾರ್ಡ್ವೇರ್ ಮತ್ತು ಸ್ಯಾನಿಟರಿ,<br>ಎಲ್ಲಾ ತರಹದ ಹಾರ್ಡ್ವೇರ್ ವಿತರಕರು,<br>ಸ್ಯಾನಿಟರಿ ಮತ್ತು ಪ್ಲೇವುಡ್ ಐಟಂಗಳು,<br>ಆಕ್ಸಿಸ್ ಬ್ಯಾಂಕ್ ಎದುರು, ಹಳೆ ಬಸ್ಟ್ಯಾಂಡ್ ರಸ್ತೆ,<br>ಕಡೂರು ಟೌನ್, ಕಡೂರು ತಾಲ್ಲೂಕು.<br>ಪ್ರತಿನಿಧಿಸುವವರು ಮಾಲೀಕರಾದ ಶ್ರೀ ಶ್ರವಣ್ ಸಿಂಗ್ ಡೋರ ಬಿನ್ ನಾರಾಯಣ್ ಸಿಂಗ್ ಡೋರ,<br>ವಯಸ್ಸು ಸುಮಾರು 29 ವರ್ಷ, ವ್ಯವಹಾರ,<br>ವಾಸಃ ಹಳೆಪೇಟೆ, ಕಡೂರು ಟೌನ್,<br>ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |
| | | ವಿರುದ್ದ |
| ಆರೋಪಿ | : | ಶ್ರೀ ಕಿರಣ್ ಬಿನ್ ಆನಂದ್,<br>ವಯಸ್ಸು ಸುಮಾರು 33 ವರ್ಷ, ವ್ಯವಹಾರ,<br>ಮದಗ ಟ್ರೇಡರ್ಸ್, ಹಾರ್ಡ್‌ವೇರ್ ಜೋನ್,<br>ಪ್ಲೆವುಡ್ ಹಾರ್ಡ್ವೇರ್ ಅಂಡ್ ಫಿಟಿಂಗ್ಸ್,<br>ಚಿಕ್ಕಮಗಳೂರು ರಸ್ತೆ, ಕಡೂರು ಟೌನ್,<br>ವಾಸಃ ಬಿ.ಜಿ.ಎಸ್. ಸ್ಕೂಲ್ ಎದುರು,<br>ಕಡೂರು ಟೌನ್, ಕಡೂರು ತಾಲ್ಲೂಕು,<br>ಚಿಕ್ಕಮಗಳೂರು ಜಿಲ್ಲೆ. |

**ಃಆಪಾದನೆಃ**

ಶ್ರೀಮತಿ ಸವಿತರಾಣಿ, ಬಿ.ಎ.ಎಲ್., ಎಲ್ ಎಲ್ ಬಿ, 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆರೋಪಣೆ.

ಪಿರ್ಯಾದುದಾರರು ಹಾಗೂ ಆರೋಪಿತರಾದ ನೀವು ಒಬ್ಬರಿಗೊಬ್ಬರು ಪರಿಚಯಸ್ಥರಾಗಿದ್ದು, ಪಿರ್ಯಾದುದಾರರಿಂದ ಪ್ಲೇವುಡ್, ಸ್ಯಾನಿಟರಿ ಐಟಂಗಳು, ಹಾರ್ಡ್ವೇರ್ ಐಟಂಗಳನ್ನು ಸಾಲದ ರೂಪದಲ್ಲಿ ದಿನಾಂಕ 03.02.2024 ರಂದು ರೂ.39,220/- ಹಾಗೂ ದಿನಾಂಕ 04.02.2024 ರಂದು ರೂ.10,785/- ರೂಗಳಿಗೆ ಪಡೆದಿದ್ದು, ಸದರಿ ಹಣದ

ಮರುಪಾವತಿಗಾಗಿ ನೀವು ನಿಮ್ಮ ಖಾತೆ ಇರುವ ಇಂಡಿಯನ್ ಓವರ್ಸೀಸ್ ಬ್ಯಾಂಕ್ ಕಡೂರು ಶಾಖೆಗೆ ಸೇರಿದ ಚೆಕ್ ಸಂಖ್ಯೆ 388605 ನ್ನು ದಿನಾಂಕ 05.02.2024 ರೂ.50,000/- ಎಂದು ನಮೂದಿಸಿರುವ ಚಕ್ಕನ್ನು ಒಂದು ಚೆಕ್ಕನ್ನು ಹಾಗೂ ಚೆಕ್ ಸಂಖ್ಯೆಃ388606 ನ್ನು ದಿನಾಂಕ 25.02.2024 ರೂ. 50,000/- ಎಂದು ನಮೂದಿಸಿರುವ ಮತ್ತೊಂದು ಚೆಕ್ಕನ್ನು ನೀಡಿ ದಿನಾಂಕ 25.02.2024 ರ ನಂತರ ನಗಧೀಕರಿಸಿಕೊಳ್ಳುವಂತೆ ತಿಳಿಸಿರುತ್ತೀರಿ.

ಅದರಂತೆ ಫಿರ್ಯಾದುದಾರರು ಸದರಿ ಎರಡು ಚೆಕ್ಕುಗಳನ್ನು ಅವರ ಖಾತೆ ಇರುವ ಕೆನರಾ ಬ್ಯಾಂಕ್, ಜೈನ್ ಟೆಂಪಲ್ ರೋಡ್ ಕಡೂರು ಶಾಖೆಗೆ ನಗಧೀಕರಣಕ್ಕಾಗಿ ಚೆಕ್ಕುಗಳನ್ನು ಸಲ್ಲಿಸಿದಾಗ, **"Funds Insufficient"** ಎಂಬ ಹಿಂಬರಹದೊಂದಿಗೆ ದಿನಾಂಕ 28.02.2024 ರಂದು ಸದರಿ ಚೆಕ್ಕುಗಳು ಅಮಾನ್ಯಗೊಂಡಿರುತ್ತದೆ. ಫಿರ್ಯಾದುದಾರರು ನಿಮಗೆ ದಿನಾಂಕ 25.03.2024 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸು ಕಳುಹಿಸಿದ್ದು, ಸದರಿ ನೋಟೀಸ್ಸು ನಿಮಗೆ ದಿನಾಂಕ 27.03.2024 ರಂದು ಜಾರಿಯಾಗಿರುತ್ತದೆ. ತದನಂತರದಲ್ಲಿ ನೀವು ಸಾಲದ ಹಣವನ್ನು ಮರುಪಾವತಿಸುವ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಆಪಾದಿತರಾದ ನೀವು ಫಿರ್ಯಾದುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಚೆಕ್ಕುಗಳನ್ನು ನೀಡಿರುವ ಕಾರಣ **ಕಲಂ 138 ವರ್ಗಾವಣೆ ಲಿಖಿತಗಳ ಅಧಿನಿಯಮ** ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆಃ 1- ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೇ ?
ಉತ್ತರಃ

ಪ್ರಶ್ನೆಃ 2- ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪರ ಪ್ರತಿರಕ್ಷಣೆ ಇದೆಯೇ?
ಉತ್ತರಃ

*(ದಿ 14.08.2024 ರಂದು ಆರೋಪಿಗೆ ಆಪಾದನೆ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದಾಗ ಆತನು ಕೊಟ್ಟ ಹೇಳಿಕೆಗಳನ್ನು ನನ್ನ ಸಮಕ್ಷಮ ಬರೆದುಕೊಂಡು ಸತ್ಯವಾಗಿದೆ ಅಂತ ನಾನು ದೃಢಪಡಿಸುತ್ತೇನೆ)*

ಸಹಿ/-
(ಶ್ರೀಮತಿ ಸವಿತರಾಣಿ ಹೆಚ್.ವಿ.)
ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್ಸಿ, ಕಡೂರು.